ದಿಃ 29-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಎ.ಜಿ.ಪಿ ಯವರಿಂದಃ-**

ವಾದಿಯು ತನ್ನ ವಾದ ಪ್ರವನ್ನು ನೋಡಿ ಸಹಿಯನ್ನು ಒಪ್ಪಿಕೊಂಡಿದ್ದು ಇರುತ್ತದೆ. ನನಗೆ ಇಂಗ್ಲೀಷ ಓದಲು ಬರೆಯಲು ಬರುವುದಿಲ್ಲ. ವಾದ ಪತ್ರದ ಸಂಗತಿಗಳನ್ನು ನಮ್ಮ ವಕೀಲರು ಬರೆದಿದ್ದು ಇರುತ್ತದೆ. ನನಗೆ ವಾದ ಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ಯಾವುದೇ ವೈಯುಕ್ತಿಕ ಮಾಹಿತಿ ಇರುವುದಿಲ್ಲ. ನಾನು ವಾದ ಪತ್ರದ ಮೇಲೆ ವಕೀಲರ ಸಮಕ್ಷಮ ಸಹಿ ಹಾಕಿದ್ದು ಇರುತ್ತದೆ.

ದಾವಾ ಆಸ್ತಿಯ ಸರ್ವೆ ನಂಬರ 559 ಇರುತ್ತದೆ. ಸದರಿ ಆಸ್ತಿಯು 100 ವರ್ಷಗಳಿಂದ ನಾವೇ ಕಬ್ಜಾದಾರರಾಗಿ ಇರುತ್ತೇವೆ. ಈ ಆಸ್ತಿಯು ನಮ್ಮ ತಾತನವರ ಕಾಲದಿಂದ ಬಂದಿದ್ದು ಇರುತ್ತದೆ. ಈ ಆಸ್ತಿಯು ನನ್ನ ತಾತನಿಂದ ನನ್ನ ಹೆಸರಿಗೆ ಬಂದಿದ್ದು ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ 100 ವರ್ಷಗಳಿಂದ ನಮ್ಮ ಕಬ್ಜೆಯಲ್ಲಿ ಇದ್ದು, ಅದಕ್ಕೆ ಸಂಬಂಧಿಸಿದ ಹಾಗೆ ದಾಖಲಾತಿಗಳನ್ನು ಹಾಜರುಪಡಿಸಿರುವಿರಾ ಎಂಬ ಪ್ರಶ್ನೆ ಸಾಕ್ಷಿದಾರರು ನಮ್ಮ ವಕೀಲರಿಗೆ ಕೇಳಬೇಕು ಎಂದು ಉತ್ತರಿಸುತ್ತಾರೆ.

ನಾನು ಜೇವರ್ಗಿ ತಾಲೂಕಿನ ಹಸ್ತಿನಾಪುರದ ಖಾಯಂ ತರೀಕ ವಾಸಿ ಆಗಿರುತ್ತೇನೆ. ಮರತೂರು ನನ್ನ ಪತ್ನಿಯ ಊರು ಎಂದರೆ ಸರಿ. ದಾವಾ ಆಸ್ತಿಯು 6 ಎಕರೆ 6 ಗುಂಟೆ ವಿಸ್ತೀರ್ಣ ಇರುತ್ತದೆ. ನಾನು ಪಹಣಿಯಲ್ಲಿ ಸದರಿ ಆಸ್ತಿಗೆ ಸಂಬಂಧಿಸಿದ ಹಾಗೆ 3 ಎಕರೆಯು ನಮೂದು ಮಾಡಿದ್ದು, ಕಡಿಮೆ ಇರುತ್ತದೆ ಎಂಬ ವಿಷಯವಾಗಿ ದಾವೆ ಹೂಡಿದ್ದು ಇರುತ್ತದೆ.

ಸದರಿ ಆಸ್ತಿಯು ಮರತೂರು ಗ್ರಾಮದಲ್ಲಿ ಇರುತ್ತದೆ. ಈ ಆಸ್ತಿಯು ನನ್ನ ಅತ್ತೆ ಮಾವನವರಿಗೆ ಸೇರಿದ ಆಸ್ತಿಯಾಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಚೆಕಬಂದಿಯನ್ನು ಸಂಪೂರ್ಣವಾಗಿ ಹೇಳಬಲ್ಲೆ. ಮುಂದುವರೆದು ಸಾಕ್ಷಿದಾರರು ನನಗೆ ಚೆಕಬಂದಿಯನ್ನು ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಆಸ್ತಿಯು ನನ್ನ ಅತ್ತೆ ಮಾವನಿಗೆ ಸೇರಿರುವ ಕಾರಣ ಅಕ್ಕಪಕ್ಕದ ಹೊಲದ ವಿಚಾರ ಮತ್ತು ಅದರ ಸರ್ವೆ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ.

ಈ ಹೊಲವು ನನ್ನ ಪತ್ನಿಯ ಹೆಸರಿನಲ್ಲಿ ವಿಭಜನೆಯಾದಾಗ ಬಂದಿದ್ದು ಇರುತ್ತದೆ. ನಾನು 6 ಎಕರೆ 6 ಗುಂಟೆ ಸ್ಥಳದ ಕಬ್ಜೆಯನ್ನು ಹೊಂದಿರುವ ಕುರಿತು ಪಹಣಿಯನ್ನು ಹಾಜರು ಮಾಡಿರುತ್ತೇನೆ. ನಿ.ಪಿ.10 ನ್ನು ನಾನೇ ಹಾಜರು ಮಾಡಿರುತ್ತೇನೆ ಎಂದರೆ ಸರಿ. ಅದರ ಜಗದ ವಿಸ್ತೀರ್ಣ 3 ಎಕರೆ 2 ಗುಂಟೆ ಇರುತ್ತದೆ

ಎಂದರೆ ಸರಿ. ದಾವಾ ಆಸ್ತಿಯ ಸಂಪೂರ್ಣ ವಿಸ್ತೀರ್ಣವು 26 ಎಕರೆಯಷ್ಟು ಇರುತ್ತದೆ. ಸರ್ವೆ ನಂ.559 ರಲ್ಲಿ ಒಟ್ಟು 4 ಹಿಸ್ಸೆಗಳು ಇರುತ್ತವೆ. ದಾವಾ ಆಸ್ತಿಯ ಯಾವ ಹಿಸ್ಸೆಗೆ ಸೇರಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಮುಂದುವರೆದು ಸಾಕ್ಷಿದಾರರು ಆಸ್ತಿಯ ಹಿಸ್ಸೆಯಲ್ಲಿ ನಮ್ಮ ಮಾವ ಒಬ್ಬರೇ ಇರುತ್ತಾರೆ ಎಂದು ನುಡಿಯುತ್ತಾರೆ.

ನಿ.ಪಿ.6 ರ ಪ್ರಕಾರ ದಸ್ತಗೀರ ತಂದೆ ಹುಸೇನ ಸಾಬ ಇವರಿಗೆ 3 ಎಕರೆ 6 ಗುಂಟೆಯಷ್ಟು ಪಹಣಿಯಂತೆ ವಿಸ್ತರಣೆ ಆಗಿರುತ್ತದೆ ಎಂದರೆ ಸರಿ. ಸರ್ವೆ ನಂ.559/2 ಒಟ್ಟು ಕ್ಷೇತ್ರವು 19 ಎಕರೆ 34 ಗುಂಟೆ ಇರುತ್ತದೆ ಎಂದರೆ ಸುಮ್ಮನಿರುತ್ತಾರೆ. ನಿ.ಪಿ.6 ರ ಮೇಲೆ ತಹಶೀಲ್ದಾರರ ಸಹಿ ಇರುವುದಿಲ್ಲ ಎಂದರೆ ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಹೊಲದ ಸರ್ವೆಯನ್ನು ಭೂ ಮಾಪಕ ಇಲಾಖೆಯಿಂದ ಮಾಡಿದ್ದು ಇರುತ್ತದೆ.

ಸದರಿ ಭೂ ಮಾಪಕ ಇಲಾಖೆಯವರನ್ನು ನಾವು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನಮ್ಮ ಹೊಲದ ಕುರಿತು ತಪ್ಪಾಗಿ ವಿಸ್ತೀರ್ಣೆಯನ್ನು ಪಹಣಿ ಪತ್ರಿಕೆಯಲ್ಲಿ ನಮೂದು ಮಾಡಿರುವ ಕುರಿತು ನನಗೆ 5 ರಿಂದ 6 ವರ್ಷಗಳ ಹಿಂದೆ ಗಮನಕ್ಕೆ ಬಂದಿರುತ್ತದೆ. ನಾವು ನೋಟೀಸನ್ನು ಭೂ ಮಾಪಕರಿಗೆ ನೀಡುವ ಬದಲು ತಹಶೀಲ್ದಾರರಿಗೆ ನೀಡಿರುವಿರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ಹೌದು ಎಂದು ಉತ್ತರಿಸುತ್ತಾರೆ.

ನಿ.ಪಿ.12 ಸಹ ಭೂ ಮಾಪಕರಿಗೆ ನೀಡಬೇಕು ಎಂದರೆ ಬದಲು ತಹಶೀಲ್ದಾರರಿಗೆ ನೀಡಿರುವಿರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ಚಿತ್ತಾಪುರದಲ್ಲಿ ಈ ನೋಟೀಸನ್ನು ನೀಡಿರುವುದಾಗಿ ಉತ್ತರಿಸುತ್ತಾರೆ. ನಿ.ಪಿ.1 ರಿಂದ 13 ಗಳ ಬಗ್ಗೆ ಯಾವುದೇ ವೈಯುಕ್ತಿಕ ಮಾಹಿತಿ ನನಗೆ ಇರುವುದಿಲ್ಲ. ದಾವೆಯಲ್ಲಾಗಲೀ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಾಗಲೀ ದಾವಾ ಆಸ್ತಿಗೆ ಸಂಬಂಧಿಸಿದ ಹಾಗೆ ಚೆಕಬಂದಿಯನ್ನು ನಾನು ಬರೆದಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ನನ್ನ ದಾವೆಯಲ್ಲಿ ಅಂತಿಮ ಪ್ರಾರ್ಥನೆಯಂತೆ 2 ಸರ್ವೆ ನಂಬರುಗಳನ್ನು ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಪಹಣಿ ಪತ್ರಿಕೆಯನ್ನು ಸರಿಪಡಿಸುವ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯ ಪರಿಹಾರವನ್ನು ನೀಡಲು ನ್ಯಾಯಾಲಯಕ್ಕೆ ಕಾರ್ಯವ್ಯಾಪ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಮಾಗಣಿಯು ಕರ್ನಾಟಕ ಭೂ ಕಂದಾಯ ಕಾಯ್ದೆ ಇದರ ಅಡಿಯಲ್ಲಿ ಊರ್ಜಿತವಾಗಿರುತ್ತದೆ ಎಂದರೆ ಸರಿಯಲ್ಲ. ನನಗೆ ದಾವೆಯ ಕುರಿತು ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಖೊಟ್ಟಿ ದಾಖಲಾತಿಗಳನ್ನು ಹಾಜರು ಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿದಾರನು ಒಪ್ಪಿಕೊಂಡಿರುತ್ತಾನೆ.

Sd/-
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ದಂಡಾಧೀಕಾರಿಗಳು, ಶಹಾಬಾದ